ಛೇರ್ಮನ್ :– ಮಾನ್ಯ ಸದಸ್ಯರೆ, ಶೂನ್ಯವೇಳೆಯಲ್ಲಿ ಫರ್ದರ್ ಕ್ಲಾರಿಫಿಕೇಶನ್ ಕೇಳುವ ಹಾಗಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಕ್ಲಾರಿಫಿಕೇಶನ್ ಅಲ್ಲದಿದ್ದರೂ ಅದಕ್ಕೆ ಅವರು ಉತ್ತರವಾದರೂ ಹೇಳಬೇಕಲ್ಲವೆ?

ಡಾ॥ ವಿ.ಎಸ್. ಆಚಾರ್ಯ :– ನಾನು ಈಗಾಗಲೇ ಹೇಳಿದ ಹಾಗೆ ನದಿಯಲ್ಲಿ ನೀರು ಹರಿದು ನಮ್ಮ ಡ್ಯಾಂನಿಂದ overflow ಆಗುವವರೆಗೂ ನಾವೂ ಯಾರ ತಂಟೆಗೂ ಹೋಗಿಲ್ಲ. ಅನಂತರ ಸಹ ಮಾರ್ಚ್ ತಿಂಗಳ ಅಂತ್ಯದವರೆಗೂ ಸಹ ನಾವು ನೀರು ಕೊಟ್ಟಿದ್ದೇವೆ. ಆದರೆ, ಈಗ ನೀರು ಅಪಾಯ ಮಟ್ಟಕ್ಕಿಂತ ಕೆಳಗೆ ಇಳಿಯುತ್ತಿದೆ. ನಗರದ ಜನತೆಗೆ ಕುಡಿಯುವ ನೀರನ್ನು ಸ್ವಲ್ಪಮಟ್ಟದಲ್ಲಿಯಾದರು ಕೊಡುವುದಕ್ಕೆ ಅಲ್ಲಿ ನೀರು ಇರಬೇಕಾಗುತ್ತದೆ. ಆದ್ದರಿಂದ ತಾವು ನಮ್ಮ ವಿವೇಚನೆಯಿಂದ ಇದರ ಬಗ್ಗೆ ಯೋಚನೆ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಅಲ್ಲಿ ಕಟ್‌ಔಟ್ ಅನ್ನು ಕಿತ್ತು ಹಾಕುವುದಕ್ಕೆ ಹೋಗಬೇಡಿ. ಅಲ್ಲಿ ಹುಕ್ ಹಾಕಿ ಕರೆಂಟ್ ತೆಗೆದುಕೊಳ್ಳುವಂಥ ಅಭ್ಯಾಸ ಮೊದಲು ಇರಲಿಲ್ಲ. ಆದ್ದರಿಂದ ಇದನ್ನು ಅಭ್ಯಾಸ ಮಾಡುವಂಥ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಡಿ.

ಡಾ॥ ವಿ.ಎಸ್. ಆಚಾರ್ಯ :– ಮಾನ್ಯ ಛೇರ್ಮನ್‌ರವರೆ, ಅಲ್ಲಿ ಬೇಗ ಮಳೆ ಬಂದರೆ, ನಾವು ಖಂಡಿತ ಅವರಿಗೆ ನೀರು ಒದಗಿಸುತ್ತೇವೆ. ಆದರೆ, ಒಂದು ವಿಷಯವನ್ನು ತಾವು ತಿಳಿದುಕೊಳ್ಳಬೇಕು. ನಾವು ಅಲ್ಲಿ ಡ್ಯಾಂ ಅನ್ನು ಕಟ್ಟದಿದ್ದರೆ, ಫೆಬ್ರವರಿ 12ರ ನಂತರ ಅಲ್ಲಿ ನೀರೇ ಇರುತ್ತಿರಲಿಲ್ಲ. ನಮ್ಮ ಜನರಿಗೆ ಕುಡಿಯುವ ನೀರೀಗೋಸ್ಕರ ಅಲ್ಲಿ ನೀರನ್ನು ಸ್ಟೋರ್ ಮಾಡಿದ್ದರಿಂದ ಅಲ್ಲಿ ನೀರಿದೆ. ಇದೂ ಕೂಡ ಬಹಳ ತೀವ್ರವಾಗಿ ಕೆಳಕ್ಕೆ ಇಳಿಯುತ್ತಿದೆ. ಆದ್ದರಿಂದ ಇಂಥ ಒಂದು ಸನ್ನಿವೇಶದಲ್ಲಿ ತಾವು ಅರ್ಥಮಾಡಿಕೊಂಡು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇ) ವಿಷಯ :– ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಕೊಕ್ಕಡ, ಪಟ್ರಮೆ ಮತ್ತು ನಿಡ್ಲೆ ಗ್ರಾಮಗಳಲ್ಲಿ ಗೊತ್ತಿಲ್ಲದೆ ಎಂಡೋಸಲ್ಫಾನ್ ಔಷಧಿಯನ್ನು ಸಿಂಪರಣೆ ಮಾಡಿರುವುದರಿಂದ ಭೀಕರ ಕಾಯಿಲೆಗೆ ತುತ್ತಾಗಿರುವ ಬಗ್ಗೆ :

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) :– ಮಾನ್ಯ ಛೇರ್ಮನ್‌ರವರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಕೊಕ್ಕಡ, ಪಟ್ರಮೆ ಮತ್ತು ನಿಡ್ಲೆ ಗ್ರಾಮಗಳಲ್ಲಿ 1970 ರಿಂದ 2000ನೇ

ಇಸವಿಯವರೆಗೆ ಗೇರು ಅಭಿವೃದ್ಧಿ ನಿಗಮದವರ ಗೇರು ಕೃಷಿ ಇತ್ತು. ಅದಕ್ಕೆ ಬರತಕ್ಕಂಥ ರೋಗವನ್ನು ತಡೆಗಟ್ಟುವುದಕ್ಕೆ ಎಂಡೋಸಲ್ಫಾನ್ ಎಂಬ ವೈಜ್ಞಾನಿಕ ಔಷಧಿಯನ್ನು ಸಿಂಪರಣೆ ಮಾಡಿದ್ದರು. ಇದರ ಬಗ್ಗೆ ಸೂಕ್ತ ಮತ್ತು ಸಕಾಲಿಕ ಮಾಹಿತಿಯನ್ನು ನೀಡದೇ ಔಷಧಿಯನ್ನು ಸಿಂಪರಣೆ ಮಾಡಿದ ಕಾರಣದಿಂದಾಗಿ ಆ ಪ್ರದೇಶದ ಗ್ರಾಮಸ್ಥರು ಒಂದು ಭೀಕರವಾದಂಥ ಖಾಯಿಲೆಗೆ ತುತ್ತಾಗಿದ್ದಾರೆ. ಅಲ್ಲಿ ಇದರಿಂದ ಪ್ರಾಣ ಹಾನಿ ಮತ್ತು ಅಲ್ಲಿರತಕ್ಕಂಥ ಜನರಿಗೆ ಅಂಗವಿಕಲತೆ ಮುಂತಾದ ಗಂಭೀರವಾದಂಥ ರೋಗಗಳ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ಕುರಿತು ಸಾರ್ವಜನಿಕರು ಮತ್ತು ನಾನು ಕೂಡ ಸರ್ಕಾರದ ಗಮನಕ್ಕೆ ತಂದರೂ ಕೂಡ ಇಷ್ಟರವರೆಗೆ ಯಾವುದೇ ಒಂದು ಪರಿಣಾಮಗಳು ಆಗಲಿಲ್ಲ. ಅವರಿಗೆ ಬೇಕಾದಂತಹ ಪರಿಹಾರವನ್ನು ಒದಗಿಸಲಿಲ್ಲ. ಅವರಿಗೆ ಪುನರ್‌ವಸತಿಯನ್ನು ಕೂಡ ಮಾಡದೇ ಇರುವುದು ಕೂಡ ನಮ್ಮ ಗಮನಕ್ಕೆ ಬಂದಿದೆ. ಹಾಗಾಗಿ ನಾನು ಸರ್ಕಾರವನ್ನು ವಿನಂತಿ ಮಾಡುವುದೇನೆಂದರೆ, ಕೇರಳಾ ರಾಜ್ಯದಲ್ಲಿಯೂ ಕೂಡ ಈ ಎಂಡೋಸೆಲ್ಫಾನ್ ಸಿಂಪರಣೆ ಮಾಡಿರುವುದರಿಂದ ತುಂಬಾ ಜನರಿಗೆ ಅನಾನುಕೂಲವಾಗಿತ್ತು. ಆ ಒಂದು ಸರ್ಕಾರ ಅವರಿಗೆ ಪರಿಹಾರ ಮತ್ತು ಪುನರ್‌ವಸತಿಯನ್ನು ಮಾಡಿದೆ. ಈ ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿಯೂ ಕೂಡ ಈ ಒಂದು ಸಿಂಪರಣೆ ಮಾಡಿರುವುದರಿಂದ ಕುರುಡುತನದಿಂದ 75 ಜನರು, ಕಿವುಡುತನದಲ್ಲಿ 25 ಜನರು, ಕ್ಯಾನ್ಸರ್‌ನಲ್ಲಿ 52 ಜನರು ಮಾನಸಿಕ ಅಸ್ವಸ್ಥರಾಗಿ 73 ಜನರು, ಮಧುಮೇಹದಲ್ಲಿ 138 ಜನರು, ಸ್ತ್ರೀ ರೋಗಗಳಿಂದ 148 ಜನರು, ಬೆಳವಣಿಗೆರಹಿತ ಮಕ್ಕಳು ಅಂದರೆ 25 ವರ್ಷದ ಮಕ್ಕಳು ಕೂಡ, ಯುವಕರೂ ಕೂಡ 2–3 ವರ್ಷದ ಮಕ್ಕಳಾಗಿ ಕಾಣುತ್ತಿದ್ದಾರೆ.

ಛೇರ್ಮನ್ :– ಮಾನ್ಯ ಸಚಿವರೆ, ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) :– ಮಾನ್ಯ ಛೇರ್ಮನ್‌ರವರೆ, ಕೃಷಿ ಇಲಾಖೆಯಿಂದ ಆ ಬಗ್ಗೆ ವರದಿಯನ್ನು ತರಿಸಿಕೊಂಡು ಸಂಬಂಧಪಟ್ಟ ಸಚಿವರಿಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ನೋಡುತ್ತೇವೆ. ನಂತರ ಈ ಬಗ್ಗೆ ನಾನು ಸುದೀರ್ಘವಾದ ಉತ್ತರವನ್ನು ಕೊಡಿಸುತ್ತೇನೆ. ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇನೆ.

ಈ) ವಿಷಯ : ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಮತ್ತು ಸಿವರೇಜ್ ಬೋರ್ಡ್ ಎಂ.ಡಿ.ಯವರು ಕೋಟಿಗಟ್ಟಲೆ ಹಣವನ್ನು ಷೇರ್ ಮಾರ್ಕೆಟ್‌ನಲ್ಲಿ ಹೂಡಿರುವ ಬಗ್ಗೆ.

ಶ್ರೀ ಎಂ.ಟಿ. ಕೃಷ್ಣಪ್ಪ :– ಸನ್ಮಾನ್ಯ ಛೇರ್ಮನ್‌ರವರೆ, ಈ ನಮ್ಮ Karnataka Urban Water Supply and Sewerage Board ಒಂದು ಇಲಾಖೆ ಇದೆ. ಸರ್ಕಾರ